(ಮಾನ್ಯ ಲಕ್ಷ್ಮೀಸಾಗರ್‌ರವರು ತಲೆಯಲ್ಲಾಡಿಸಿದರು)

ಶ್ರೀ ಹೆಚ್. ಸಿ. ಶ್ರೀಕಂಠಯ್ಯ:—ಏಕೆ ಅಲ್ಲ? ಸುಮಾರು ೧೫–೨೦ ವರ್ಷಗಳಿಂದ ಮಾನ್ಯ ಶಾಮಣ್ಣನವರು ಮತ್ತು ಮಾನ್ಯ ರಾಮದೇವ್‌ರವರು ಕಾರ್ಪೊರೇಷನ್‌ನಲ್ಲಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ:—ಮಾನ್ಯ ಮಂತ್ರಿಗಳ ಅಭಿಪ್ರಾಯದಲ್ಲಿ ಸೊಳ್ಳೆಗಳನ್ನು ಹುಟ್ಟಿಸಿದವರು ಶಾಮಣ್ಣನವರು ಮತ್ತು ರಾಮದೇವ್‌ರವರು ಎಂದು ಕಾಣುತ್ತದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ:—ಈಗ ಸೊಳ್ಳೆ ಇಷ್ಟು ಜಾಸ್ತಿಯಾಗುತ್ತಾ ಇರುವುದಕ್ಕೆ ಕಾರಣ ಏನೆಂದರೆ ಈ ಕಾರ್ಪೊರೇಷನ್ ಆಡಳಿತ ಹಿಂದಿನಿಂದಲೂ ಕೂಡ ಶ್ರೀ ಶಾಮಣ್ಣನವರ ಮತ್ತು ಶ್ರೀ ರಾಮದೇವ್ ಅವರ ಕೈಯಲ್ಲಿ ಇದ್ದುದರಿಂದ ಹಿ ದಿನಿಂದಲೂ ಕೂಡ ಇಷ್ಟು ಹೆಚ್ಚಾಗಿ ಇದು ಬೆಳೆದು ಕೊಂಡು ಬಂದಿದೆ ಈಗ ಕೆಲವು ವರ್ಷಗಳಿಂದ ಮಾತ್ರ ಈ ಕಾರ್ಪೊರೇಷನ್ ಆಡಳಿತ ನಮ್ಮ ಕೈಗೆ ಬಂದದ್ದು ಆದುದರಿಂದ ಈ ಸೊಳ್ಳೆ ಜಾಸ್ತಿ ಆದದ್ದು ನಮ್ಮ ಕಾಲದಲ್ಲಿ ಅಲ್ಲ. ಸೊಳ್ಳೆಗಳು ಏನಾದರೂ ಜಾಸ್ತಿ ಯಾಗಿದ್ದರೆ ಅದು ಅವರ ಕಾಲದಲ್ಲೇ ಒಟ್ಟಿನಲ್ಲಿ ಇದನ್ನು ಎರ ಡಿಕೇಷನ್ ಮಾಡಬೇಕು ಅದಕ್ಕೋಸ್ಕರವಾಗಿ ಮಲೇರಿಯಾ ಎರಾಡಿಕೇಷನ್‌ನವರು ಸಾಕಷ್ಟು ಗಮನಿಸಿ ಲಾರ್ಸನ್ ಅಂಡ್ ಬಾರ್ಬೋ ಕಂಪನಿಯೊಂದಿಗೆ ಕಾಂಟ್ರಾಕ್ಟ್ ಮಾಡಿ ವ್ಯವಹಾರ ಮಾಡುತ್ತಿದ್ದಾರೆ. ಈ ಸೊಳ್ಳೆಗಳು ಸಾಮಾನ್ಯವಾಗಿ ಎಲ್ಲಾ ಕೆರೆಗಳಲ್ಲೂ ಕೂಡ ಇವೆ. ಕಾರಣ ಎಲ್ಲಾ ಕೆರೆಗಳಲ್ಲೂ ಜೊಂಡು ಇದೆಯೆಲ್ಲಾ ಅದಕ್ಕೋಸ್ಕರ ನಾವು ಏನು ಸ್ಪೇ ಮಾಡಿ, ಎಂತಹ ಔಷಧಿಗಳನ್ನು ಉಪಯೋಗಿಸಿದರೂ ಕೂಡ ಹೋಗುತ್ತಾ ಇಲ್ಲ. ಈ ಜೊಂಡು ವರ್ತೂರು ಕೆರೆ ಓಂದರಲ್ಲಿ ಇಲ್ಲ. ಎಲ್ಲಾ ಕೆರೆಗಳಲ್ಲೂ ಕೊಡ ಇದೆ ಆದರಲ್ಲಿ ವೀಡ್ ಏನು ಇದೆ ಅವನ್ನು ತೆಗೆಯಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಅವರು ದೊಡ್ಡ ದೊಡ್ಡ ಫರ್ಮ್‌ನೊಂದಿಗೆ ಕಾಂಟ್ರಾಕ್ಟ್ ಮಾಡಿ ಇದನ್ನು ನಿರ್ಮೂಲನ ಮಾಡುವುದಕ್ಕೆ ಶಕ್ಕ ಗಮನವನ್ನು ಹರಿಸುತ್ತಿದ್ದಾರೆ. ಆದರೂ ಕೂಡ ಇದನ್ನು ಸಂಪೂರ್ಣವಾಗಿ ನಿವಾರಣೆ ಮಾಡುವುದಕ್ಕೆ ಕಷ್ಟ. ಆ ಸೊಳ್ಳೆ ನಮ್ಮ ಕಾಂಗ್ರೆಸ್‌ನವರನ್ನೂ, ಬಿಡುವುದಿಲ್ಲ, ಜನತಾದವರನ್ನೂ ಬಿಡುವುದಿಲ್ಲ. ಆದುದರಿಂದ ಇದನ್ನು ನಿರ್ಮೂಲನ ಮಾಡುವುದಕ್ಕೆ ಶ್ರೀ ಶಾಮಣ್ಣನವರು ಮತ್ತು ಶ್ರೀ ರಾಮದೇವ್ ಮತ್ತು ಎಲ್ಲರೂ ಕೂಡ ಏನು ಪ್ರಯತ್ನ ಮಾಡ ಬೇಕೋ ಅದನ್ನು ಮಾಡೋಣ ಅದಕ್ಕಾಗಿ ಒಂದು ಸಮಿತಿಯನ್ನ ನೇಮಕ ಮಾಡಿ ಇದರ ಆಸ್ಪೆಕ್ಟ್ ಏನು ಇದೆ ಅದನ್ನು ಕನ್ಸಿಡರ್ ಮಾಡೋಣ. ಅದರ ಬಗ್ಗೆ ತಾವೆಲ್ಲಾ ಸಲಹೆಯನ್ನು ಕೊಟ್ಟರೆ ಈ ಬಗ್ಗೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳೋಣ.

ಶ್ರೀ ಎಸ್. ಆರ್. ಬೊಮ್ಮಾಯಿ:—ಸ್ವಾಮಿ, ಈ ಸೊಳ್ಳೆ ಸಮಿತಿಗಾದರೂ ಕೂಡ ಅವರಿಗೆ ಪ್ರಾತಿನಿಧ್ಯ ಕೊಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ:—ಒಟ್ಟಿನಲ್ಲಿ ಹೇಳುವುದಾದರೆ ಈ ಸಮಿತಿಗೆ ತಾವೆಲ್ಲಾ ಏನು ಸಲಹೆಯನ್ನು ಕೊಡುತ್ತೀರಾ ಅದನ್ನು ನೋಡಿಕೊಂಡು ಆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳುತ್ತೇವೆ.

Matters under Rule 312

regarding indifference of Some Officers in Bangalore District belonging to Public works Education and Rural Development Departments to the representations made by the Members of Legislature

SRI M. V. RAJASHEKARAN(Uttarahalli):—I wish to raise a matter under Rule 312 regarding indifferece of some of the Officers in Bangalore District belonging to Departments of Public Works, Education and Rural Development to the representations ma le by the Members o Legislatuare etc.,

† Sri D.DEVARAJ URS (Chief Minister):—Hon.Member Sri Rajashekaran has raised a matter under Rule 312 regarding the alleged indi-

fference of some of the Officers in Bangalore District belonging to Department of Public Works, Education and Rural Development to the representation made by the Members of Legislature. His complaint was that the representations given to the Officers by Members of the State Legislature are not being properly attended to particularly the problems relating to Scheduled Castes, Backward Classes in the areas falling under their jurisdiction. We have made enquiries with the Deputy Commissioner, Bangalore District and the concerned Officers of the P W.D. Education, and Rural Development Department. It is reported that in the Development Wing of the Deputy Commissioner's Office, two petitions forwarded by the hon Member Sri Rajashekaran *i.e.*, on May 10, and 24 th, 1978 were traced and necessary action has been taken on both the petitions. The first petition was by the Members of the Bangalore North Taluka Board regarding water. supply and street lights in Peenya village and that has been referred to Asst. Commissioner. Bangalore for taking appropriate action and the hon. M.L.A. has been kept informed of the action taken.

As regards second representation regarding distribution of sites to the Harijans at Gullakanale Village in Uttarahalli Hobli, Bangalore District, there is a stay order from the High Court and the hon. Member has been apprised of the same.

The Executive Engineer, P.W.D. has also reported that prompt action is being taken on all the representations received in his Office and the problems are being solved to the extent possible depending upon the availability of the grants placed at the disposal of the division and he stated that suitable replies have been sent to the hon.Members from time to time. Then, developmental works for which targets have been fixed have been completed well in time. The Executive Engineer has also reported that there have been cases where the expenditure has been exceeded over the original allotment and the additional grants have been requested for. It is also ascertained from the the Office of the Deputy Commissioner, Deputy Director of Public Instruction of Bangalore District and the Rural Development that no case of indifference shown to any member of the State Legislature has come to their notice. Prompt action is reported to have been taken by all the Officers concerned on matters pertaining to the problems of the SCs/STs, backward classes and other weaker sections of the Society. The D.C. is also holding monthly meetings regularly to review the progress of works in all departments and also to find satisfactons, solutions and remedial measures to the grievances made by thd public in their representations In spite of these may be there are some cases of indifference as was pointed out.. I cannot say completely that every petition by every person has been attended

to. That is why, the Government have now been insisting on the D.Cs to hold periodical meetings wherein they could get all the Officers and the problems of the people could be solved properly. They could also invite the legislators of those areas in these meetings. In spite of this if there are some more specific cases, I shall be very happy to attend to them.

ಶ್ರೀ ಎಂ.ವಿ. ರಾಜಶೇಖರನ್.—ಸ್ವಾಮಿ, ಈ ಒಂದು ವಿಷಯವನ್ನು ನಾನು ಬಹಳ ನೊಂದ ಮನಸ್ಸಿನಿಂದ ತಮ್ಮ ಗಮನಕ್ಕೆ ತಂದಿದ್ದೇನೆ. ಇದರಲ್ಲಿ ಒಂದು ವಿರೋಧಭಾಸ ಏನು ಕಾಣುತ್ತದೆ ಎಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಯಾವ ಪತ್ರ ಬರೆದರೂ ಕೂಡ ಆದಷ್ಟು ಶೀಘ್ರವಾಗಿ ಅವರು ಗಮನ ಕೊಟ್ಟು ಎಲ್ಲಾ ಶಾಸಕರಿಗೂ ಸಹ ಪತ್ರ ಬರೆಯುತ್ತಾರೆ, ಹೀಗಿರುವಾಗ ಅದೇ ಮುಖ್ಯಮಂತ್ರಿಗಳು ಇನ್‌ಎಫಿಸಿಯೆನ್ಸಿ ಆಫೀಸರ ವಿಚಾರದಲ್ಲಿ ಡಿಫೆಂಡ್ ಮಾಡಿಕೊಳ್ಳುವಂಥಾ ಒಂದು ವಿರೋಧಭಾಸ ಉಂಟಾಗಿದೆ.

ಇನ್ನು ಎರಡನೆಯದಾಗಿ ನಾನು ಎತ್ತಿರತಕ್ಕಂಥಾ ಪ್ರಶ್ನೆಗೆ ದುರ್ದೈವದಿಂದ ಏನು ಉತ್ತರ ಬಂದಿದೆ. ಎಂದರೆ ಬೆಂಗಳೂರು ಜಿಲ್ಲಾಧಿಕಾರಿಯವರ ವಿಚಾರದಲ್ಲಿ ಅಂತ ಬಂದಿದೆ. ಇದು ತಪ್ಪು ಏಂದು ಹೇಳುತ್ತೇನೆ. ತಮಗೆ ಹೇಳಬೇಕಾದರೆ ಬೆಂಗಳೂರು ಜಿಲ್ಲಾಧಿಕಾರಿಯವರಿಗೆ ನಾನು ಯಾವ ಪತ್ರ ಬರೆದರೂ ಕೂಡ ಅವರು ತಕ್ಷಣ ಉತ್ತರ ಕೊಟ್ಟಿದ್ದಾರೆ, ಮತ್ತು ಅದರ ಮೇಲೆ ಆಕ್ಷನ್ ಕೂಡ ತೆಗೆದುಕೊಂಡಿದ್ದಾರೆ ಈಗ ಇರತಕ್ಕಂಥಾ ಜಿಲ್ಲಾಧಿಕಾರಿಗಳೇ ಅಲ್ಲಿ, ಹಿಂದೆ ಇದ್ದಂಥಾ ಜಿಲ್ಲಾಧಿಕಾರಿಗಳೂ ಕೂಡ ತಕ್ಷಣ ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ನಾನು ಸಾಮಾನ್ಯವಾಗಿ ಈ ಪ್ರಶ್ನೆ ಹಾಕುವುದಕ್ಕೆ ಮುಂಚಿತವಾಗಿ ಚೆನ್ನಾಗಿ ವಿಚಾರ ಮಾಡುತ್ತೇನೆ. ಸಾಮಾನ್ಯವಾಗಿ ನಾನು ಯಾವ ಸರ್ಕಾರೀ ಆಫೀಸರ್ಸ್ ವಿಚಾರದಲ್ಲಿಯಾಗಲೀ ಅಥವಾ ಯಾವ ಮಂತ್ರಿಗಳ ವಿಚಾರದಲ್ಲಿಯಾಗಲಿ ಯಾವ ಟೀಕೆಯನ್ನೂ ಕೂಡ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಇದನ್ನ ವೈಯುಕ್ತಿಕವಾಗಿ ಹೇಳುತ್ತಿದ್ದೇನೆ. ಏತಕ್ಕೆಂದರೆ ಸಾಮಾನ್ಯವಾಗಿ ಪ್ರಜಾ ಪ್ರಭುತ್ವ ನಡೆಯಬೇಕಾದರೆ ಪ್ರಜಾಪ್ರತಿನಿಧಿಗಳು...

ಅಧ್ಯಕ್ಷರು —ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಗೆ ಹೋಗಬೇಕಾಗಿರುವುದರಿಂದ ತಾವು ಈ ವಿಚಾರದಲ್ಲಿ ಏನು ಒಂದು ಸ್ಪಷ್ಟೀಕರಣ ಕೇಳಬೇಕೋ ಅದನ್ನು ಕೇಳಿ, ದೀರ್ಘವಾದ ಭಾಷಣ ಮಾಡುವುದು ಬೇಡ. ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ನಾನು ಜಿಲ್ಲಾಧಿಕಾರಿಗಳ ವಿಚಾರದಲ್ಲಿ ಹೇಳುತ್ತಾ ಇಲ್ಲ ಮತ್ತು ಸರ್ಕಾರದ ಮಟ್ಟದಲ್ಲಿ ಏನೊಂದು ಸ್ಟೇಟ್ ಲೆವಲ್ ಕಮಿಟಿ ಅಂತ ಏನು ಇದೆ ಅವರ ವಿಚಾರದಲ್ಲಿ ಹೇಳುತ್ತಾ ಇಲ್ಲ, ಈಗ ಬಂದಿರತಕ್ಕಂಥಾ ವಿಚಾರ ಏನೆಂದರೆ—

ಶ್ರೀ ಡಿ. ದೇವರಾಜ ಅರಸ್.—ನೀವು ಬರೆದಿರುವ ಪ್ರಕಾರ ಇದರಲ್ಲಿ ಬೆಂಗಳೂರು ಡಿಫ್ಫಿಕ್ಟ್ ಅಂತ ಇದೆ. ಆದ್ದರಿಂದ ನೀವು ಈ ಬಗ್ಗೆ ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಹೇಳುವುದಾದರೆ ಮುಂದೆ ಯಾವುದಾದರೂ ಸಂದರ್ಭ ಬಂದಾಗ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಬಂದಾಗ ಮಾತನಾಡಬಹುದು. ಈಗ ನಾನು ಕೌನ್ಸಿಲ್‌ಗೆ ಹೋಗಬೇಕಾಗಿರುವುದರಿಂದ ಅಲ್ಲಿ ನನಗೆ ಸಂಬಂಧಪಟ್ಟಂತೆ ಚುಕ್ಕೆಗುರುತಿನ ಪ್ರಶ್ನೆಗಳು, ಅಲ್ಪಕಾಲಾವಧಿ ಪ್ರಶ್ನೆಗಳು, ಮತ್ತು ತಡೆಹಿಡಿಯಲಾದ ಪ್ರಶ್ನೆಗಳು ಇವೆಲ್ಲಾ ಇವೆ. ಇದಕ್ಕೆಲ್ಲಾ ನಾನು ಉತ್ತರ ಕೊಡಬೇಕಾಗಿರುವುದರಿಂದ ಸ್ವಲ್ಪ ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಎಂ. ರಾಜಶೇಖರನ್.—ಮಾನ್ಯ ಮುಖ್ಯಮಂತ್ರಿಗಳಿಗೆ ಹೆಚ್ಚು ಕಾಲಾವಕಾಶ ಇಲ್ಲದೇ ಇರುವುದರಿಂದ ನಾನು ಸ್ವಲ್ಪ ಸಂಕ್ಷಿಪ್ತವಾಗಿಯೇ ಹೇಳುತ್ತೇನೆ. ಇದು ಬಹಳ ಮುಖ್ಯವಾದ ವಿಚಾರ. ಏತಕ್ಕೆಂದರೆ ಬೆಂಗಳೂರು ಸೌತ್ ತಾಲ್ಲೂಕ್ ಏನು ಇದೆ ಅಲ್ಲಿರತಕ್ಕಂಥಾ ಅಭಿವೃದ್ಧಿ ಅಧಿಕಾರಿಯ ವಿಚಾರದಲ್ಲಿ ಹೇಳುವುದಾದರೆ ಅಲ್ಲಿಯ ಒಂದು ಆಡಳಿತ ಯಾವರೀತಿ ನಡೆಯುತ್ತಾ ಇದೆ, ಮತ್ತು ಆ ಬಗ್ಗೆ ಸರ್ಕಾರ ತೆಗೆದುಕೊಂಡಂಥಾ ಕಾರ್ಯಕ್ರಮಗಳ ಬಗ್ಗೆ ಅವರು ಯಾವರೀತಿ ನಡೆಸುತ್ತಿದ್ದಾರೆ ಅದರ ಒಂದು ಪಟ್ಟಿಯನ್ನು ನಾನು ತಮಗೆ ಕೊಡುವುದಾದರೆ ನನಗೆ ಬಹಳ ದುಃಖವಾಗುತ್ತದೆ. ಈ ಬಗ್ಗೆ ನಾನು ಸುಮಾರು ೩೦-೪೦ ಪತ್ರಗಳನ್ನು ಅವರಿಗೆ ಈ ತಾಲ್ಲೂಕಿನ ಅಭಿವೃದ್ಧಿಯ ವಿಚಾರದಲ್ಲಿ ಬರೆದಿದ್ದೇನೆ, ಇಲ್ಲಿಯವರೆಗೂ ಕೂಡ ಆ ಬಗ್ಗೆ ನನಗೆ ಒಂದಕ್ಕೂ ಉತ್ತರ ಬಂದಿಲ್ಲಾ.

ನಾನು ಬೇಕಾದರೆ ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುತ್ತೇನೆ, ತಾವು ಇದರ ಬಗ್ಗೆ ಒಂದು ಎನ್‌ಕ್ವಯರಿ ಕಮಿಟಿಯನ್ನು ನೇಮಿಸಬೇಕು. ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿ ಕಮಿಟಿಯನ್ನು ನೇಮಕ ಮಾಡಿದರೆ ಸಾಕು.

SRI D.DEVARAJ URS:—I have already told about that. The hon. Member need not go into the details. If there are any specific cases I request the hon.Member to pass it on to me. I shall certainly look into them and take appropriate action.

ಶ್ರೀ ಎಂ. ವಿ. ರಾಜಶೇಖರನ್:—ಮಾನ್ಯಮಂತ್ರಿಗಳಿಗೆ ನನ್ನ ಪ್ರಶ್ನೆಗೆ ಒಪ್ಪಿಗೆ ಕೊಟ್ಟಿದ್ದಾರೆ, ಸಂತೋಷ. ಎರಡನೆಯದು, ಅಧಿಕಾರಿಗಳ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಸದನದ ಸದಸ್ಯರು ಯಾರಾದರೂ ಪತ್ರವನ್ನು ಬರೆದರೆ ಆದಷ್ಟು ಜಾಗ್ರತೆಯಾಗಿ ಉತ್ತರ ಕೊಡುವಂತೆ ತಾವು ಸೂಚನೆ ಕೊಡ ಬೇಕು.

(*ii*) *re: Publication of Archeology of Coorg.*

SRI QAMARUL ISLAM:—I raise the matter I had given notice of under rule 312

MR SPEAKER:—The Hon.Minister for Education is not in a position to attend the House in view of his illness. The matter will be taken up on some other day.

SRI QAMARUL ISLAM:—Sir, this is a very important matter. Agitation is going on through out the country regarding this book. Therefore, I request the Chair to take up this matter to-day itself.

MR. SPEAKER.—I have already told you the matter will be taken up on some other day.

SRI QAMARUL ISLAM.—I would request the Chair to take up th matter tomorrow.

MR. SPEAKER.—It will be taken up as early as possible.

(*iii*) *re: Bowl Sterlisers.*

SRI S.R. BOMMAI.—Sir, I have given a notice regarding 'Bowl sterlisers' appeared in the Deccan Herald.

ಅಧ್ಯಕ್ಷರು.—ಮೂರುವರೆ ಗಂಟೆಗೆ ಅದನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಮೇಲ್ಮನೆಯಲ್ಲಿಯು ಪ್ರಶ್ನೋತ್ತರ ಬೇಳೆ ಮುಗಿದು ಹೊ ದೆ ಅಲ್ಲಿಯೂ ಕೂಡ ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದಾದ ಮೇಲೆ ಮಾನ್ಯಮಂತ್ರಿ ಇಲ್ಲಿಗೆ ಬರುತ್ತಾರೆ.

ಅಧ್ಯಕ್ಷರು.—ಇಂದಿನ ಚೆರ್ಚೆ ಮುಗಿದ ತಕ್ಷಣ, ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತಾವು ಪ್ರಸ್ತಾಪ ಮಾಡಿದ ವಿಚಾರದಲ್ಲಿಯೇ ಮೇಲ್ಮನೆಯಲ್ಲಿ ಮಾ ಪ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ.

SRI S.M. YAHYA.—Sir, now we can take up the general discussio on the Budget. Before we take up Bills and other items in th agenda this matter can be taken up.